**ದಿನಾಂಕ 03.11.2011 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಸಭಾಂಗಣದಲ್ಲಿ ನಡೆದ ಜೆಎನ್‌ನರ್ಮ್ ಯೋಜನೆಯ ಕಾರ್ಯಕಾರಿ ಸಮಿತಿಯ ಪ್ರಗತಿಪರಿಶೀಲನಾ ಸಭೆ ನಡವಳಿಗಳು**

ಸಭೆ ದಿನಾಂಕ : 03.11.2011
ಸಭೆ ಸಮಯ : ಬೆಳಗ್ಗೆ 11.30 ಘಂಟೆ
ಸಭೆಯ ಅಧ್ಯಕ್ಷತೆ : ಶ್ರೀ ಪಿ.ಎಸ್. ವಸ್ತ್ರದ್, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಹಾಗೂ ವಿಶೇಷಾಧಿಕಾರಿಗಳು (ಜೆಎನ್‌ನರ್ಮ್)

**ಹಾಜರಿದ್ದ ಸದಸ್ಯರು:**

1. ಶ್ರೀ. ಕೆ.ಎಸ್. ರಾಯ್ಕರ್, ಆಯುಕ್ತರು, ಮೈನಪಾ, ಮೈಸೂರು.
2. ಶ್ರೀ. ಬೆಟ್ಟಸೂರಮಠ್, ಆಯುಕ್ತರು, ಮೈನಪ್ರಾ, ಮೈಸೂರು.
3. ಶ್ರೀ. ಬಿ.ಕೆ. ಸುರೇಶ್ ಬಾಬು, ಅಧೀಕ್ಷಕ ಇಂಜಿನಿಯರ್, ನರ್ಮ್, ಮೈನಪಾ, ಮೈಸೂರು.
4. ಶ್ರೀ. ಶಿವಕುಮಾರ್ ಕೆ.ಪಿ., ಅಧೀಕ್ಷಕ ಇಂಜಿನಿಯರ್, ಮೈನಪ್ರಾ, ಮೈಸೂರು.
5. ಶ್ರೀ. ಶ್ರೀನಿವಾಸ್, ವಿಭಾಗೀಯ ನಿಯಂತ್ರಣ ಅಧಿಕಾರಿ, ಕರಾರಸಾಸ, ಮೈಸೂರು.
6. ಶ್ರೀ. ಸುಬ್ಬೇಗೌಡ. ಎಸ್, ಕಾರ್ಯಪಾಲಕ ಇಂಜಿನಿಯರ್, ಕೆಯುಡಬ್ಲ್ಯೂಎಸ್&ಡಿಬಿ, ಮೈಸೂರು.
7. ಶ್ರೀ. ಎ.ಸಿ.ಚಾಮರಾಜೇಗೌಡ, ಕಾರ್ಯಪಾಲಕ ಇಂಜಿನಿಯರ್, ನರ್ಮ್, ಮೈನಪಾ, ಮೈಸೂರು.
8. ಶ್ರೀ. ವೀರಭದ್ರಯ್ಯ ಎಸ್. ಕಾರ್ಯಪಾಲಕ ಇಂಜಿನಿಯರ್, ಮೈನಪ್ರಾ, ಮೈಸೂರು.
9. ಶ್ರೀ. ಕೆ.ಎಸ್. ಶಿವಲಿಂಗಪ್ಪ, ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.
10. ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು, ಜೆಎನ್‌ನರ್ಮ್, ಮೈನಪಾ / ಮೈನಪ್ರಾ, ಮೈಸೂರು.

ಪ್ರಾರಂಭದಲ್ಲಿ ಅಧೀಕ್ಷಕ ಅಭಿಯಂತರರು, ನರ್ಮ್, ಮೈಸೂರು ಮಹಾನಗರ ಪಾಲಿಕೆ ಇವರು ಮಾನ್ಯ ಜಿಲ್ಲಾಧಿಕಾರಿಯವರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು. ನಂತರ ಮಾನ್ಯ ಅಧ್ಯಕ್ಷರು ನರ್ಮ್ ಕಾಮಗಾರಿಯ ಪ್ರಗತಿಯ ವಿವರವನ್ನು ತಿಳಿಸಲು ಸೂಚಿಸಿದರು.

ಕೇಂದ್ರ ಸರ್ಕಾರದ ನರ್ಮ್ ಅಡಿಯಲ್ಲಿ ಮೈಸೂರು ನಗರಕ್ಕೆ ಒಟ್ಟು ` 1149.33 ಕೋಟಿ ಮೊತ್ತದ ಎರಡು ಯೋಜನೆಗಳು ಅನುಮೋದನೆಗೊಂಡಿದ್ದು, ಮೊದಲನೇಯದಾಗಿ ಯು.ಐ.ಜಿ. ಯೋಜನೆ ಮೊತ್ತ `890.89 ಕೋಟಿಗಳಾಗಿದ್ದು, ಈ ಯೋಜನೆ ಅಡಿ 10 ಕಾಮಗಾರಿಗಳು ಅನುಮೋದನೆಗೊಂಡಿದ್ದು (1 ಪಿ.ಐ.ಯು. ಸೇರಿದಂತೆ), ಇವುಗಳನ್ನು ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಕೆ.ಎಸ್.ಆರ್.ಟಿ.ಸಿ., ಕೆ.ಯು.ಡಬ್ಲ್ಯೂ.ಎಸ್.&ಡಿ.ಬಿ ಮತ್ತು ಕೊಳಗೇರಿ ಅಭಿವೃದ್ಧಿ ಮಂಡಳಿ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಎರಡನೇಯದಾಗಿ ಬಿಎಸ್‌ಯುಪಿ ಯೋಜನೆ 258.44 ಕೋಟಿಗಳಾಗಿದ್ದು, ಈ ಯೋಜನೆ ಅಡಿ 4 ಕಾಮಗಾರಿಗಳನ್ನು ಮೈಸೂರು ಮಹಾನಗರ ಪಾಲಿಕೆ ಮತ್ತು ಕೊಳಗೇರಿ ಅಭಿವೃದ್ಧಿ ಮಂಡಳಿಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಅಧೀಕ್ಷಕ ಅಭಿಯಂತರರು, ನರ್ಮ್ ಇವರು ವಿವರ ನೀಡಿದರು.

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಯುಎಲ್‌ಬಿಯ ಪಾಲುದಾರಿಕೆಯಿಂದ ನರ್ಮ್ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದುವರೆಗೂ ಯು.ಐ.ಜಿ ಯೋಜನೆಗೆ ` 416.32 ಕೋಟಿಗಳು ಮತ್ತು ಬಿಎಸ್‌ಯುಪಿ ಯೋಜನೆಗೆ ` 109.00 ಕೋಟಿ ಒಟ್ಟು ` 525.32 ಕೋಟಿ ಬಿಡುಗಡೆ ಮಾಡಲಾಗಿದೆ. ಅಕ್ಟೋಬರ್ –2011 ರ ಅಂತ್ಯಕ್ಕೆ ` 525.32 ಕೋಟಿಗಳ ಅನುದಾನದ ಬಿಡುಗಡೆಗೆ ಎದುರಾಗಿ ` 682.11 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ ಎಂದು ವಿವರಿಸಿದರು.

ವಿವಿಧ ಅನುಷ್ಠಾನ ಸಂಸ್ಥೆಗಳು ನಿರ್ವಹಿಸುತ್ತಿರುವ ಕಾಮಗಾರಿವಾರು ಪ್ರಗತಿಯನ್ನು ಈ ಕೆಳಕಂಡಂತೆ ಮಾನ್ಯ ಅಧ್ಯಕ್ಷರು ಪರಿಶೀಲಿಸಿದರು.

**1) ಮೈಸೂರು ನಗರದ ಕುಡಿಯುವ ನೀರು ವಿತರಣ ಜಾಲವನ್ನು ಪುನರ್ ನಿರ್ಮಾಣ ಮಾಡುವುದು : –**

ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಮಾತನಾಡುತ್ತಾ ಕ.ನ.ನೀ.ಸ. ಮತ್ತು ಒ. ಮಂಡಳಿ ವತಿಯಿಂದ ` 194.54 ಕೋಟಿ ಯೋಜನಾ ವೆಚ್ಚದೊಂದಿಗೆ ಕುಡಿಯುವ ನೀರಿನ ವಿತರಣಾ ಜಾಲದ ಪುನರ್ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಈ ಯೋಜನೆಯಡಿ ಕಾಮಗಾರಿಗಳನ್ನು 5 ಪ್ಯಾಕೇಜ್‌ಗಳಾಗಿ ವಿಂಗಡಿಸಿ ಕೈಗೆತ್ತಿಕೊಳ್ಳಲಾಗಿದ್ದು, ಮೊದಲನೇ ಪ್ಯಾಕೇಜ್‌ನ ಟೆಂಡರ್ ಮೊತ್ತ ` 77.40 ಕೋಟಿಗಳಾಗಿದ್ದು, ಈ ಪ್ಯಾಕೇಜ್ ಅಡಿಯಲ್ಲಿ 26.25 ಕಿಮೀ ಗೆ ಪೈಪ್‌ಲೈನ್ ಅಳವಡಿಸುವ ಕಾಮಗಾರಿ, 25 ಜಲಸಂಗ್ರಹಣಾಗಾರಗಳ ಕಾಮಗಾರಿಗಳು ಡಿಸೆಂಬರ್–2010 ಕ್ಕೆ ಪೂರ್ಣಗೊಂಡಿವೆ ಹಾಗೂ ಎರಡನೇ ಪ್ಯಾಕೇಜ್ ಸ್ಕಾಡಾದ ಆಟೋಮೊಡ್‌ನ ವ್ಯವಸ್ಥೆಯ ರೀತಿಯದ್ದಾಗಿದ್ದು ಇಲ್ಲಿನ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಎಂದು ತಿಳಿಸಿದರು.

ಮೂರನೇ ಮತ್ತು ನಾಲ್ಕನೇಯ ಪ್ಯಾಕೇಜ್‌ಗಳು ಮೈಸೂರು ನಗರದಲ್ಲಿ 24x7 ನಿರಂತರ ನೀರು ಸರಬರಾಜು ವಿತರಣೆಯ ಯೋಜನೆಯಾಗಿದೆ. ಈ ಯೋಜನೆಯು ಮಾರ್ಚ್–2012ಕ್ಕೆ ಪೂರ್ಣಗೊಳ್ಳುವ ಸಾಧ್ಯತೆಯಿದೆ ಎಂದು ತಿಳಿಸಿದರು.

ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರು ಮಾತನಾಡುತ್ತಾ 24x7 ನಿರಂತರ ನೀರು ಸರಬರಾಜು ವಿತರಣೆಯ ಯೋಜನೆಗೆ ಸಂಬಂಧಿಸಿದಂತೆ ಮೈಸೂರು ಮಹಾನಗರ ಪಾಲಿಕೆ, ನೀರು ಸರಬರಾಜು ಮಂಡಳಿ ಮತ್ತು ಮೆ॥ ಜಸ್ಕೋ ಇವರ ನಡುವೆ ದಿನಾಂಕ 28.11.2008 ರಂದು ಟ್ರೈಪಾರ್ಟಿ

ಒಪ್ಪಂದ ನಡೆದಿದ್ದು, ಮೆ॥ ಜಸ್ಕೋರವರು ಕರಾರಿನಂತೆ ಒಂದು ವರ್ಷವನ್ನು ಈ ಯೋಜನೆಯ ಬಗ್ಗೆ ಅಧ್ಯಯನಕ್ಕಾಗಿ ಉಪಯೋಗಿಸಿದರು ಎಂದು ತಿಳಿಸಿದರು. ನಂತರ ಮೈಸೂರು ನಗರದಲ್ಲಿ ನೀರು ವಿತರಣಾ ಜಾಲದ ಕಾಮಗಾರಿಗಳು ಕಳೆದ 2 ವರ್ಷಗಳಿಂದ ಪ್ರಗತಿಯಲ್ಲಿದ್ದು, ಕರಾರಿನ ಪ್ರಕಾರ 1,17,521 ಸಂಪರ್ಕಗಳು ಕಾರ್ಯನಿರತವಾಗಬೇಕಾಗಿದೆ. ಈವರೆಗೆ ಸುಮಾರು 60,000 ಸಂಪರ್ಕ 24x7 ವ್ಯಾಪ್ತಿಗೆ ಒಳಪಡಬೇಕಿದ್ದು, ಈವರೆಗೆ ಸುಮಾರು 50,000 ಸಂಪರ್ಕ ನೀಡಲಾಗಿದ್ದು, ಕೇವಲ 25,000 ಸಂಪರ್ಕಕ್ಕೆ ಹೊಸ ಜಾಲದಿಂದ ನೀರು ನೀಡಲಾಗುತ್ತಿದ್ದು, ಈ ಭಾಗದಲ್ಲಿ ಸಹ 24x7 ನಿರಂತರ ನೀರು ಸರಬರಾಜು ಮಾಡುವಲ್ಲಿ ವಿಫಲರಾಗಿದ್ದು ದಿನದಲ್ಲಿ 5 ಘಂಟೆಗಳ ಕಾಲ ಮಾತ್ರ ನೀರಿನ ಸರಬರಾಜನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು. ಮೆ॥ ಜಸ್ಕೋ ರವರಿಗೆ ಒಂದು ಕಮಾಂಡ್ ಏರಿಯಾ ತೆಗೆದುಕೊಂಡು ಅದನ್ನು 24x7 ನಿರಂತರ ನೀರು ಸರಬರಾಜು ಪೂರ್ಣಗೊಳಿಸಲು ಪ್ರತಿ ಸಭೆಯಲ್ಲಿ ಸೂಚಿಸಲಾಗಿದ್ದರೂ ಸಹ ಮೆ॥ ಜಸ್ಕೋರವರು ಇದನ್ನು ಅಳವಡಿಸಿಕೊಂಡಿಲ್ಲ ಹಾಗೂ Mid term analysis ಕೂಡಲೇ ಆಗಬೇಕಿದ್ದು, ಈ ಯೋಜನೆಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸುವ ಸಾಧ್ಯತೆ ಇರುವುದಿಲ್ಲ ಎಂದು ತಿಳಿಸಿದರು.

ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಮಾತನಾಡುತ್ತಾ ಭೌತಿಕ ಕಾಮಗಾರಿಗಳು ಹಾಗೂ ಮೀಟರ್ ಅಳವಡಿಸುವ ಕಾಮಗಾರಿಗಳು ಪೂರ್ಣಗೊಂಡಿದ್ದು, 24x7 ನಿರಂತರ ನೀರು ಸರಬರಾಜನ್ನು ವಿತರಿಸುವ ಕಾರ್ಯದಲ್ಲಿ ಮಾತ್ರ ವಿಳಂಬವಾಗುತ್ತಿದೆ ಎಂದು ತಿಳಿಸಿದರು. 1,35,000 ಸಂಪರ್ಕವನ್ನು 48 ರಿಂದ 50 ವಾರ್ಡ್‌ಗಳಲ್ಲಿ ಡಿಸೆಂಬರ್ 2012 ರೊಳಗೆ ಪೂರ್ಣಗೊಳಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಮೆ॥ ಜಸ್ಕೋರವರಿಗೆ ಕರಾರಿನಂತೆ 167 ಎಂಎಲ್‌ಡಿ ಪಾಲಿಕೆ ನೀಡಬೇಕಿದ್ದು, ಬದಲಾಗಿ 175 ರಿಂದ 200 ಎಂಎಲ್‌ಡಿ ನೀರನ್ನು ಸರಬರಾಜು ಮಾಡುತ್ತಿರುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡುತ್ತಾ ಮೈಸೂರಿನ 48 ವಲಯಗಳಲ್ಲೂ (ಡಿ.ಎಂ.ಎ) 24x7 ನಿರಂತರ ನೀರು ಸರಬರಾಜನ್ನು 7 ಮೀ. ಒತ್ತಡದಂತೆ ಪೂರೈಸಲಾಗುತ್ತಿದೆ ಹಾಗೂ ಎಷ್ಟು ಮನೆಯ ಕೊಳಾಯಿ ಸಂಪರ್ಕವನ್ನು ನೀಡಲಾಗಿದೆ ಎಂದು ಪ್ರಶ್ನಿಸಿದರು.

ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಮಾತನಾಡುತ್ತಾ 50,000 ರಿಂದ 60,000 ಮನೆಯ ಕೊಳಾಯಿ ಸಂಪರ್ಕಗಳಿಗೆ ಸಂಪೂರ್ಣ ಸಿದ್ಧತೆಯನ್ನು ಮಾಡಲಾಗಿದೆ ಎಂದು ತಿಳಿಸಿದರು.

ಮೈಸೂರಿನಲ್ಲಿ 48 ಡಿ.ಎಂ.ಎ.ಗಳಿಗೆ ಡಿಸೆಂಬರ್ 2012 ರ ಒಳಗೆ 24x7 ನೀರು ಸರಬರಾಜು ಮಾಡಲು ಹಾಗೂ ಉಳಿಕೆ ಭಾಗಗಳಿಗೆ ಫೆಬ್ರವರಿ ಅಂತ್ಯದೊಳಗೆ ಒದಗಿಸಲು ಸೂಚಿಸಿದರು. ಪ್ರತಿ ತಿಂಗಳೂ ನೀಡಬಹುದಾದ ಮನೆ ಸಂಪರ್ಕಗಳ ಬಗ್ಗೆ ಕಾರ್ಯಕ್ರಮ ಪಟ್ಟಿ ತಯಾರಿಸಿ ಅದಕ್ಕೆ ಬದ್ಧರಾಗಿರುವಂತೆ ಮಾನ್ಯ ಜಿಲ್ಲಾಧಿಕಾರಿಗಳು ನಿರ್ದೇಶಿಸಿದರು.

**2) ಕಬಿನಿ ನೀರು ಸರಬರಾಜು ಯೋಜನೆ : –**

` 108.81 ಕೋಟಿ ಯೋಜನಾ ವೆಚ್ಚದೊಂದಿಗೆ ಕಬಿನಿ ನೀರು ಸರಬರಾಜು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದನ್ನು ಕೆ.ಯು.ಡಬ್ಲ್ಯೂ.ಎಸ್&ಡಿ.ಬಿ ಇಂದ ಅನುಷ್ಠಾನಗೊಳಿಸಲಾಗುತ್ತಿದೆ. ಹೊಸದಾಗಿ ಕಬಿನಿ ನದಿಯಿಂದ 60 ಎಂ.ಎಲ್.ಡಿ. ನೀರನ್ನು ಮೈಸೂರಿಗೆ ಒದಗಿಸುವ ಯೋಜನೆಯಾಗಿರುತ್ತದೆ. ಇದರಿಂದ ಮೈಸೂರು ನಗರದಲ್ಲಿ ಪಾಲಿಕೆ ವ್ಯಾಪ್ತಿಯ ಶೇಕಡಾ 30 ರ ಭಾಗಕ್ಕೆ ಹಾಗೂ ಮೂಡಾ ವ್ಯಾಪ್ತಿಯ ಶೇಕಡಾ 70 ರ ಭಾಗಕ್ಕೆ ನೀರಿನ ಸೌಲಭ್ಯ ಒದಗಿಸಬಹುದಾಗಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರರವರು ತಿಳಿಸಿದರು. ಕಾಮಗಾರಿಗಳು ಪ್ರಗತಿಯಲ್ಲಿದ್ದು, ಜೂನ್ 2012 ಕ್ಕೆ ಪೂರ್ಣಗೊಳಿಸುವುದಾಗಿ ತಿಳಿಸಿದರು. ಆದರೆ ನರ್ಮ್ ಯೋಜನಾ ಅವಧಿಯು ಮಾರ್ಚ್ 2012 ಕ್ಕೆ ಅಂತ್ಯಗೊಳ್ಳುತ್ತಿರುವುದರಿಂದ ಕಾಮಗಾರಿಯನ್ನು ಮಾರ್ಚ್ 2012 ರೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಪಾಲಿಕೆಯ ಆಯುಕ್ತರು ಸೂಚಿಸಿದರು.

ದಟ್ಟಗಳ್ಳಿಯಲ್ಲಿ ನಿರ್ಮಾಣವಾಗಬೇಕಾಗಿದ್ದ ಮಾಸ್ಟರ್ ಬ್ಯಾಲೆನ್ಸಿಂಗ್ ರಿಸರ್ವ್‌ವಾಯರ್ ಸ್ಥಳವನ್ನು ಆರ್.ಟಿ.ನಗರಕ್ಕೆ ಬದಲಾಯಿಸಲಾಗಿದ್ದು, ಇದಕ್ಕೆ ಬೇಕಾಗಿರುವ ಭೂಮಿಯನ್ನು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಒದಗಿಸಿ ಕೊಡಬೇಕಾಗಿ ಕಾರ್ಯಪಾಲಕ ಅಭಿಯಂತರರು ಕೋರಿದರು. ಅಲ್ಲದೆ ಈ ಯೋಜನೆಯನ್ನು ಕೈಗೊಳ್ಳುವ ಸಂದರ್ಭದಲ್ಲಿ ಒಪ್ಪಿದಂತೆ ` 5.05 ಕೋಟಿಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ ನೀಡುವಂತೆ ಮತ್ತು ಬ್ಯಾಲೆನ್ಸಿಂಗ್ ರಿಸರ್ವ್‌ವಾಯರ್ ಸ್ಥಳ ಬದಲಾವಣೆಯಿಂದ ಉಂಟಾಗುವ ಹೆಚ್ಚುವರಿ ಪೈಪು ವೆಚ್ಚವನ್ನು ಸಹ ನೀಡುವಂತೆ ಕಾರ್ಯಪಾಲಕ ಇಂಜಿನಿಯರ್ ಕೋರಿದು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮೂಡಾ ಆಯುಕ್ತರಿಗೆ ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು.

**3) ಸಾರಿಗೆ ವ್ಯವಸ್ಥೆಗೆ ಮೂಲ ಸೌಕರ್ಯ ಒದಗಿಸುವುದು :-**

ಮೈಸೂರು ನಗರದಲ್ಲಿ ಸಾರಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ` 85.25 ಕೋಟಿಗಳ ಯೋಜನಾ ಮೊತ್ತದೊಂದಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಕೈಗೆತ್ತಿಕೊಳ್ಳಲಾಗಿದೆ.

7 ಬಸ್ಸ್ ನಿಲ್ದಾಣಗಳ ಪೈಕಿ 6 ನಿಲ್ದಾಣಗಳ ಕಾಮಗಾರಿಗಳು ಪೂರ್ಣಗೊಂಡು ಉದ್ಘಾಟನೆಯಾಗಿರುತ್ತದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವರು ವಿವರಿಸಿದರು. ಚಾಮುಂಡಿ ಬೆಟ್ಟದ ಕಾಮಗಾರಿಯ ಸ್ಥಳಕ್ಕೆ ಸಂಬಂಧಿಸಿದಂತೆ ತಕರಾರಿದ್ದು, ಘನ ಉಚ್ಚನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು, ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು. 150 ಬಸ್ಸ್‌ಗಳನ್ನು ಖರೀದಿಸಲಾಗಿದ್ದು, ಮೈಸೂರು ನಗರದಲ್ಲಿ ಕಾರ್ಯನಿರತವಾಗಿದೆ ಎಂದು ತಿಳಿಸಿದರು. ನರ್ಮ್ ಅಡಿಯಲ್ಲಿ Intelligent transport system & Innovative environment ಯೋಜನೆಯು ಪ್ರಗತಿಯಲ್ಲಿದ್ದು, ಜನವರಿ 2012 ಕ್ಕೆ ಪೂರ್ಣಗೊಳ್ಳುವುದೆಂದು ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದರು. ಮೈಸೂರಿನಲ್ಲಿ Intelligent transport system & Innovative environment ವ್ಯವಸ್ಥೆಗಾಗಿ ` 22.70 ಕೋಟಿಗಳ ಯೋಜನೆ ಅನುಮೋದನೆಯಾಗಿದ್ದು, ಇದಕ್ಕಾಗಿ 105 ಬಸ್ಸ್ ಶೆಲ್ಟರ್‌ಗಳು ನಿರ್ಮಾಣವಾಗುತ್ತಿದ್ದು, ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳಿಸುವುದಾಗಿ ತಿಳಿಸಿದರು.

ನರ್ಮ್ ಅಡಿಯಲ್ಲಿ ಮೈಸೂರು ನಗರಕ್ಕೆ ಉತ್ತಮ ಸಾರಿಗೆ ಸೌಲಭ್ಯ ಒದಗಿಸಲಾಗಿದ್ದು, ಇದು ಸಾರ್ವಜನಿಕ ಸಂಪರ್ಕ ವ್ಯವಸ್ಥೆಯಾಗಿರುವುದರಿಂದ, ವಾಹನ ಚಾಲಕರುಗಳಿಗೆ ಶಿಸ್ತು, ಸಮಯ ಪಾಲನೆ, ವಾಹನ ನಿಲುಗಡೆ ಇತ್ಯಾದಿಗಳ ಬಗ್ಗೆ ಸೂಕ್ತ ತರಬೇತಿ ನೀಡುವಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು.

**4. ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆ :-**

` 29.85 ಕೋಟಿ ಯೋಜನಾ ವೆಚ್ಚದೊಂದಿಗೆ ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಕಾಮಗಾರಿಯನ್ನು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇದುವರೆಗೂ ` 7.67 ಕೋಟಿಗಳ ಪ್ರಗತಿ ಸಾಧಿಸಲಾಗಿದೆ. ಕಸ ನಿರ್ವಹಣೆಗೆ ಅವಶ್ಯವಿರುವ ಸಾಧನ, ಸಲಕರಣೆ ಹಾಗೂ ವಾಹನಗಳನ್ನು ಖರೀದಿಸಲಾಗಿದ್ದು, ವಾಹನಗಳಿಗೆ ಜಿ.ಪಿ.ಎಸ್. ಅಳವಡಿಕೆ ಕಾಮಗಾರಿ ಪೂರ್ಣಗೊಂಡಿರುತ್ತದೆ ಎಂದು ಅಧೀಕ್ಷಕ ಅಭಿಯಂತರರು ವಿವರಿಸಿದರು.

ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರು ಮಾತನಾಡುತ್ತಾ ಕಳೆದ 15 ವರ್ಷಗಳ ಹಿಂದೆ ಈ ಪ್ರದೇಶವು ಕೈಗಾರಿಕಾ ಪ್ರದೇಶವಾಗಿದ್ದುದರಿಂದ ಘನತ್ಯಾಜ್ಯ ವಿಲೇವಾರಿಯಿಂದ ಯಾವುದೇ ತೊಂದರೆ ಬಗ್ಗೆ ದೂರುಗಳು ಇರಲಿಲ್ಲ. ಆದರೆ ಪ್ರಸಕ್ತವಾಗಿ  ಸುತ್ತಮುತ್ತಲಿನ ಜಾಗವನ್ನು ಭೂ ಪರಿವರ್ತಿಸಿ ವಾಸಿಸಲು ಸಾರ್ವಜನಿಕರು ಉಪಯೋಗಿಸುತ್ತಿರುವುದರಿಂದ ಈಗ ಅಲ್ಲಿರುವ ಜನರಿಗೆ ತೊಂದರೆಯಾಗುತ್ತಿದೆ. ಇದನ್ನು ತಡೆಯಲು ಬ್ಯಾರಿಕೇಡಿಂಗ್ ಗೋಡೆಯನ್ನು ನಿರ್ಮಿಸಲಾಗಿದೆ. ವಾಸನೆ ಬರಬಾರದೆಂದು ಯಾವುದೇ ಪದಾರ್ಥವನ್ನು ಸುಟ್ಟು ಹಾಕಲಾಗುತ್ತಿಲ್ಲ. ಆದರೆ ಮಾಂಸಾಹಾರದ ತ್ಯಾಜ್ಯಗಳಿಂದ ಮಾತ್ರ ವಾಸನೆ ಬರುತ್ತಿದೆ ಇದನ್ನು ಸಹ ತಡೆಗಟ್ಟಲು 439 ಅಂಗಡಿಗಳಿಂದ ನೇರವಾಗಿ ತ್ಯಾಜ್ಯ ಸಂಗ್ರಹಿಸಲು ನಗರ ಪಾಲಿಕೆಯ 5 ವಾಹನಗಳನ್ನು ನೇಮಿಸಲಾಗಿದ್ದು, ಇದರ ಮೂಲಕ ತ್ಯಾಜ್ಯಗಳನ್ನು ಸಂಗ್ರಹಿಸಿ ಆ ತ್ಯಾಜ್ಯವನ್ನು ಕೆಸರೆಯ ಸಂಸ್ಕರಣ ಘಟಕದಲ್ಲಿ ಹಾಕಿ ಮಣ್ಣನ್ನು ಮುಚ್ಚಲಾಗುತ್ತಿದೆ ಎಂದು ತಿಳಿಸಿದರು.

ಅಧೀಕ್ಷಕ ಅಭಿಯಂತರರು ಮಾತನಾಡುತ್ತಾ ಈ ಯೋಜನೆ ಅಡಿ ಪಾಲಿಕೆಯ ವಾಹನಗಳಿಗೆ ಜಿಪಿಎಸ್ ಅಳವಡಿಸಿರುವುದರಿಂದ ಇಂಧನದಲ್ಲಿ ಉಳಿತಾಯವಾಗುತ್ತಿದ್ದು, ಇವು ದಿನದಿಂದ ದಿನಕ್ಕೆ ಅಭಿವೃದ್ಧಿಗೊಳ್ಳುತ್ತಿದೆ ಎಂದು ತಿಳಿಸಿದರು. 5 ಎಕರೆ ಪ್ರದೇಶದಲ್ಲಿ ಹೊಂಡ ಭರ್ತಿ ಅಗೆತ ಕಾಮಗಾರಿ ಪೂರ್ಣಗೊಂಡಿದ್ದು, 2.96 ಎಕರೆ ಪ್ರದೇಶದಲ್ಲಿ ಪದರ ಹಾಕುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿದರು. 2009 ರಲ್ಲಿ ಈ ಭಾಗವನ್ನು ಹಸರೀಕರಣಗೊಳಿಸಲು ಸುಮಾರು 13500 ಸಸಿಗಳನ್ನು ನೀಡಲಾಗಿದ್ದು, ಈಗ ಅವು ಬೆಳೆದಿರುತ್ತದೆ ಎಂದು ತಿಳಿಸಿದರು. ಮೂಲಭೂತ ಸೌಕರ್ಯದ ಕಾಮಗಾರಿಗಳಾದ ವೇಬ್ರಿಡ್ಜ್ ನಿರ್ಮಾಣ, ಕಛೇರಿ ಕಟ್ಟಡ ನಿರ್ಮಾಣ, ಭದ್ರತಾ ಕೊಠಡಿ ನಿರ್ಮಾಣ ಪ್ರಗತಿಯಲ್ಲಿದೆ ಎಂದು ವಿವರಿಸಿದರು.

ಮೈಸೂರಿನ ಪ್ರತಿ ವಾರ್ಡ್‌ಗಳಲ್ಲಿ ಮನೆ ಮನೆಗಳಿಗೆ ಪ್ಲಾಸ್ಟಿಕ್ ಕಸಬುಟ್ಟಿಗಳನ್ನು ವಿತರಿಸಿ ಮನೆಯ ಕಸವನ್ನು ಸಂಗ್ರಹಿಸಲು ಯೋಜನೆ ಮಾಡಲಾಗಿದ್ದು, ಇದಕ್ಕಾಗಿ ಟೆಂಡರನ್ನು ಕರೆದಿದ್ದು, ಕಸದ ಬುಟ್ಟಿಯ ಮಾದರಿಯನ್ನು ಪರೀಕ್ಷಿಸಲಾಗುತ್ತಿದೆ ಹಾಗೂ ಪ್ರತಿ ಮನೆಗೆ ತಲಾ 2 ರಂತೆ ವಿತರಿಸಿ ಹಸಿ ಮತ್ತು ಒಣ ಕಸವನ್ನು ಮನೆಯಿಂದಲೇ ಬೇರ್ಪಡಿಸುವ ಯೋಜನೆ ಇದಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಮನೆಗಳಿಗೆ ಕಸದ ಬುಟ್ಟಿಯನ್ನು ವಿತರಿಸುವ ಒಂದು ತಿಂಗಳ ಮುಂಚಿತವಾಗಿ ಇದರ ಉಪಯೋಗದ ಬಗ್ಗೆ ಹಾಗೂ ಕಸವನ್ನು ಬೇರ್ಪಡಿಸುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಸೂಕ್ತ ತರಬೇತಿ ನೀಡಲು ಸೂಚಿಸಿದರು.

ಆಯುಕ್ತರು ಮೈಸೂರು ಮಹಾನಗರ ಪಾಲಿಕೆ ಇವರು ಮಾತನಾಡುತ್ತಾ ದಿನಾಂಕ 13.02.2009 ರಂದು ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ನಡೆದ ಸಮಾವೇಶದಲ್ಲಿ 15,000 ಮನೆಗಳಿಂದ ಮಹಿಳೆಯರು ಭಾಗವಹಿಸಿದ್ದು, ಅವರಿಗೆ ತರಬೇತಿಯನ್ನು ನೀಡಲಾಗಿದೆಯೆಂದು ಹಾಗೂ ಈ ವರ್ಷದ ಅಂತ್ಯದೊಳಗೆ ಪ್ರತಿ ಮನೆಗೆ ತಲಾ ಎರಡರಂತೆ ಕಸದ ಬುಟ್ಟಿಯನ್ನು ಮನೆಗಳಿಗೆ ವಿತರಿಸಲಾಗುವುದು ಎಂದು ತಿಳಿಸಿದರು.

ಈ ಯೋಜನೆ ಅಡಿ ಕೈಗೊಂಡಿರುವ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಬಿಂಬಿಸಲು ಅನುಕೂಲವಾಗುವಂತೆ ಅಭಿವೃದ್ಧಿಯ ಮೊದಲಿನ ಹಾಗೂ ಇಂದಿನ ಛಾಯಚಿತ್ರವನ್ನು ಸಂಗ್ರಹಿಸಿ ದಾಖಲಿಸಲು ಹಾಗೂ ವಿಡಿಯೋ ಕ್ಲಿಪ್ಪಿಂಗ್ ದಾಖಲಿಸುವಂತೆ ಹಾಗೂ ಇದನ್ನು ಸಾರ್ವಜನಿಕರ ಮಾಹಿತಿಗೆ ಪ್ರಚಾರಪಡಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು.

**5. ದೊಡ್ಡ ಮಳೆ ನೀರು ಚರಂಡಿ ಪುನರ್ ನಿರ್ಮಾಣ ಕಾಮಗಾರಿಗಳು :-**

ಮೈಸೂರು ನಗರದಲ್ಲಿ ದೊಡ್ಡ ಮಳೆ ನೀರು ಚರಂಡಿ ಪುನರ್ ನಿರ್ಮಾಣ ಕಾಮಗಾರಿಗಳನ್ನು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ಮೈಸೂರು ನಗರದಲ್ಲಿ 6 ಕಣಿವೆಗಳ ಅಡಿಯಲ್ಲಿ ಬರುವ ಚರಂಡಿಗಳ ಪುನರ್ ನಿರ್ಮಾಣ ಕಾಮಗಾರಿಗಳನ್ನು ` 347.28 ಕೋಟಿಗಳ ಮೊತ್ತದೊಂದಿಗೆ ಪ್ರಸ್ತಾಪಿಸಲಾಗಿತ್ತು. ಆದರೆ ಎಸಿಎಯನ್ನು ` 100.00 ಕೋಟಿಗಳಿಗೆ ನಿಗಧಿಪಡಿಸಿದ್ದರಿಂದ ಬನ್ನಿಮಂಟಪ ಹಾಗೂ ಹೆಬ್ಬಾಳ ಕೆರೆ ವ್ಯಾಲಿ ಅಡಿಯ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲಾಗಿರುತ್ತದೆ ಎಂದು ಅಧೀಕ್ಷಕ ಇಂಜಿನಿಯರ್, ನರ್ಮ್ ಇವರು ವಿವರಿಸಿದರು.

ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ 5 ಪ್ಯಾಕೇಜ್‌ನಲ್ಲಿ ವಹಿಸಲಾಗಿದ್ದು, ಇದುವರೆಗೆ ` 85.40 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. ಕೇಂದ್ರ ಸರ್ಕಾರದಿಂದ 2 ನೇ ಕಂತಿನ ಅನುದಾನ ಬಿಡುಗಡೆಯಲ್ಲಿ ಸುಮಾರು 8-12 ತಿಂಗಳು ವಿಳಂಬವಾಗಿದ್ದು, ಇದರಿಂದ ಕಾಮಗಾರಿಗಳ ಪ್ರಗತಿಯಲ್ಲಿ ಕುಂಠಿತಗೊಂಡಿದ್ದು, ಈಗ ಅನುದಾನ ಬಿಡುಗಡೆಯಾಗಿದ್ದು, ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅಧೀಕ್ಷಕ ಇಂಜಿನಿಯರ್, ನರ್ಮ್ ಇವರು ತಿಳಿಸಿದರು.

ಬನ್ನಿಮಂಟಪ ವ್ಯಾಲಿ ಅಂತಿಮ ಭಾಗದಲ್ಲಿ ಮಳೆ ನೀರು ಚರಂಡಿ ಕೆಸರೆ ಹಾಗು ಸಿದ್ಧಲಿಂಗಪುರ ಗ್ರಾಮಗಳಲ್ಲಿ ಹಾದು ಹೋಗುತ್ತಿದ್ದು, ಈ ಭಾಗದಲ್ಲಿ ಕಾಮಗಾರಿ ಕೈಗೊಳ್ಳಲು ಭೂಸ್ವಾಧೀನದ ಅವಶ್ಯಕತೆ ಇದ್ದು, ಇದಕ್ಕಾಗಿ ಈಗಾಗಲೇ ಪ್ರಸ್ತಾವನೆ ಸಲ್ಲಿಸಿರುವುದಾಗಿ ಅಧೀಕ್ಷಕ ಇಂಜಿನಿಯರ್, ನರ್ಮ್ ಇವರು ತಿಳಿಸಿದರು.

**6. ಪಾರಂಪಾರಿಕ ಕೋರ್ ಅಭಿವೃದ್ಧಿ:-**

ಯೋಜನಾ ಮೊತ್ತ `. 39.45 ಕೋಟಿಗಳಾಗಿದ್ದು, ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು 4 ಪ್ಯಾಕೇಜ್‌ಗಳಲ್ಲಿ ವಹಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅಧೀಕ್ಷಕ ಇಂಜಿನಿಯರ್, ನರ್ಮ್ ಇವರು ತಿಳಿಸಿದರು.

ಈ ಯೋಜನೆಯಡಿ ಹಾರ್ಡಿಂಗ್ ಸರ್ಕಲ್, ಅರಮನೆಯ ಸುತ್ತಲಿನ 4 ಭಾಗಗಳ ರಸ್ತೆ ಅಭಿವೃದ್ಧಿ ಕಾಮಗಾರಿ ಮಾಡಬೇಕಾಗಿರುವುದರಿಂದ ಅರಮನೆಯ ಸುತ್ತಲಿನಲ್ಲಿ ಟ್ರಾಫಿಕ್ ತೊಂದರೆಯನ್ನು ತಡೆಯಲು ಒಂದು ಭಾಗದ ಕಾಮಗಾರಿ ಮುಗಿದ ನಂತರ ಮತ್ತೊಂದು ಭಾಗದ ಕಾಮಗಾರಿಯನ್ನು ಹೆಚ್ಚಿನ ತಂಡಗಳನ್ನು ಅಳವಡಿಸುವ ಮೂಲಕ ಕೈಗೆತ್ತಿಕೊಳ್ಳಲಾಗುವುದೆಂದು ಅಧೀಕ್ಷಕ ಇಂಜಿನಿಯರ್, ನರ್ಮ್ ವಿವರಿಸಿದರು.

**7. ಎರಡು ಪಥದ ಹೊರ ವರ್ತುಲ ರಸ್ತೆಯನ್ನು 6 ಪಥಗಳಿಗೆ ವಿಸ್ತರಿಸುವುದು – (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ):-**

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ` 239.51 ಯೋಜನಾ ಮೊತ್ತದೊಂದಿಗೆ ಹೊರವರ್ತುಲ ರಸ್ತೆಯನ್ನು 6 ಪಥಗಳಿಗೆ ವಿಸ್ತರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ 4 ಪ್ಯಾಕೇಜ್‌ಗಳಲ್ಲಿ ವಹಿಸಲಾಗಿದ್ದು ಇದುವರೆಗೂ ` 96.00 ಕೋಟಿಗಳ ಪ್ರಗತಿ ಸಾಧಿಸಿರುವುದಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇವರು ತಿಳಿಸಿದರು.

ಕೇಂದ್ರ ಸರ್ಕಾರದಿಂದ 2 ನೇ ಕಂತಿನ ಅನುದಾನ ಬಿಡುಗಡೆಯಲ್ಲಿ ವಿಳಂಭವಾಗಿದ್ದರಿಂದ, ಕಾಮಗಾರಿ ಪ್ರಗತಿ ಕುಂಠಿತಗೊಂಡಿದ್ದು, ಈಗ ಅನುದಾನ ಬಿಡುಗಡೆಯಾಗಿದ್ದು, ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅಧೀಕ್ಷಕ ಇಂಜಿನಿಯರ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇವರು ವಿವರಿಸಿದರು.

**8. ಕೊಳಚೆ ಪ್ರದೇಶಗಳ ಪುನರ್‌ವಸತಿ ಮತ್ತು ಮೂಲಭೂತ ಸೌಕರ್ಯ ಒದಗಿಸುವುದು :-**

ಮೈಸೂರು ನಗರದಲ್ಲಿ ಕೊಳಚೆ ಪ್ರದೇಶದ ಪುನರ್ವಸತಿ ಕಾಮಗಾರಿಗಳನ್ನು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆ ಅಡಿ ಕಾಮಗಾರಿಗಳನ್ನು 3 ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ ಎಂದು ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ವಿವರಿಸಿದರು.

**ಹಂತ 1 :–** ಮೊದಲನೇ ಹಂತದಲ್ಲಿ ಒಟ್ಟು 2788 ಮನೆಗಳ ನಿರ್ಮಾಣದೊಂದಿಗೆ 20 ಕೊಳಚೆ ಪ್ರದೇಶದ ಪುನರ್ವಸತಿಯನ್ನು ಪರಿಗಣಿಸಲಾಗಿದೆ. ವಿವಿಧ ಬಡಾವಣೆಗಳಲ್ಲಿ 15 ಪ್ಯಾಕೇಜ್‌ಗಳಲ್ಲಿ ಕಾಮಗಾರಿಯನ್ನು ವಹಿಸಲಾಗಿದ್ದು, ಇದರಲ್ಲಿ 14 ಪ್ಯಾಕೇಜ್‌ಗಳ ಕಾಮಗಾರಿಯು ಪ್ರಗತಿಯಲ್ಲಿರುವುದಾಗಿ ವಿವರಿಸಿದರು. 2788 ಮನೆಗಳ ಪೈಕಿ 2568 ಮನೆಗಳ ಕಾಮಗಾರಿ ಪ್ರಗತಿಯಲ್ಲಿದ್ದು, ಇದರಲ್ಲಿ 2436 ಮನೆಗಳು ಪೂರ್ಣಗೊಂಡಿರುವುದಾಗಿ ತಿಳಿಸಿದರು.

**ಹಂತ 2 :–** ಈ ಹಂತದಲ್ಲಿ 2500 ಮನೆಗಳ ನಿರ್ಮಾಣದೊಂದಿಗೆ 46 ಕೊಳಚೆ ಪ್ರದೇಶಗಳ ಪುನರ್ವಸತಿಯನ್ನು ಪರಿಗಣಿಸಲಾಗಿರುತ್ತದೆ. 8 ಪ್ಯಾಕೇಜ್‌ಗಳಲ್ಲಿ ಕಾಮಗಾರಿಯನ್ನು ವಹಿಸಲಾಗಿದ್ದು, ಎಲ್ಲಾ ಪ್ಯಾಕೇಜ್‌ಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. 2500 ಮನೆಗಳ ಪೈಕಿ 2360 ಮನೆಗಳು ಪ್ರಗತಿಯಲ್ಲಿದ್ದು, ಅದರಲ್ಲಿ 1636 ಮನೆಗಳು ಪೂರ್ಣಗೊಂಡಿರುವುದಾಗಿ ತಿಳಿಸಿದರು.

**ಹಂತ 3 :–** ಈ ಹಂತದಲ್ಲಿ 1040 ಮನೆಗಳ ನಿರ್ಮಾಣದ ಪೈಕಿ 992 ಮನೆಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಇದರಲ್ಲಿ ಸರ್ವೆ ಮೂಲಕ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ವಿವರಿಸಿದರು.

ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರು ಮಾತನಾಡುತ್ತಾ 69 ಕೊಳಚೆ ಪ್ರದೇಶವನ್ನು ಗುರುತಿಸಲಾಗಿರುತ್ತದೆ. ಇಲ್ಲಿ ಕೇವಲ ಮನೆಗಳನ್ನು ನಿರ್ಮಿಸಿದ್ದು, ಇತರೇ ಮೂಲಭೂತ ಸೌಕರ್ಯಗಳಾದ ನೀರಿನ ಸೌಲಭ್ಯ ಮತ್ತು ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಕಲ್ಪಿಸಿ ಮನೆಗಳನ್ನು ಫಲಾನುಭವಿಗಳಿಗೆ ನೀಡಲು ಈಗಾಗಲೇ ಹಲವಾರು ಬಾರಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳಿಗೆ ಸೂಚಿಸಿದ್ದರೂ, ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಇರುವುದನ್ನು ತಿಳಿಸಿದರು.

ಅಗತ್ಯ ಮೂಲಭೂತ ಸೌಕರ್ಯ ಒದಗಿಸದೆ ಕೇವಲ ಮನೆಗಳನ್ನು ನಿರ್ಮಿಸಿ ಹಾಗೇ ಬಿಟ್ಟಿರುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಹಾಗೂ ವಾಸವಿಲ್ಲದೇ ಮನೆಗಳು ಹಾಳಾಗುವ ಸಂಭವವಿರುವುದರಿಂದ, ಕೂಡಲೇ ಅಗತ್ಯ ಮೂಲಭೂತ ಸೌಕರ್ಯ ಒದಗಿಸಿ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳು ನಿರ್ದೇಶಿಸಿದರು. ಅಲ್ಲದೇ, ಮಂಡಳಿಯ ಅಧಿಕಾರಿಗಳ ನಿರ್ಲಕ್ಷತೆಯನ್ನು ಗಂಭೀರವಾಗಿ ಪರಿಗಣಿಸಿ ಈ ಬಗ್ಗೆ ಮಂಡಳಿಯ ಆಯುಕ್ತರಿಗೆ ಪತ್ರ ಬರೆಯಲು ಸೂಚಿಸಿದರು.

**9. ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುವಂತಹ ಆರ್ಥಿಕವಾಗಿ ಹಿಂದುಳಿದಂತ ಸಮುದಾಯಕ್ಕೆ ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯ ಒದಗಿಸುವುದು:–**

ಬಿಎಸ್‌ಯುಪಿ ಯೋಜನೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮನೆಗಳನ್ನು 4 ಪ್ಯಾಕೇಜ್‌ನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಒಟ್ಟು 980 ಮನೆಗಳ ಪೈಕಿ 711 ಪ್ರಾರಂಭಿಸಲಾಗಿರುತ್ತದೆ. 826 ಮನೆಗಳ ನಿರ್ಮಾಣ ಕಾಮಗಾರಿಯನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಲಾಗಿದ್ದು ಇದರಲ್ಲಿ 96 ಮನೆಗಳು ಪ್ರಗತಿಯಲ್ಲಿರುವುದಾಗಿ ಅಧೀಕ್ಷಕ ಇಂಜಿನಿಯರ್, ನರ್ಮ್ ರವರು ತಿಳಿಸಿದರು. ಯೋಜನಾ ಮೊತ್ತ ` 52.35 ಕೋಟಿಗಳಾಗಿದ್ದು, ಇದುವರೆಗೂ ` 14.7 ಕೋಟಿಗಳ ಪ್ರಗತಿ ಸಾಧಿಸಿರುವುದಾಗಿ ತಿಳಿಸಿದರು.

ಸದರಿ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳು ಅವರ ಭಾಗದ ವಂತಿಕೆ ಸುಮಾರು ` 40,000/– ಗಳನ್ನು ಪಾವತಿಸಬೇಕಾಗಿದ್ದು, ಹಲವಾರು ಫಲಾನುಭವಿಗಳು ಹಣವನ್ನು ಕಟ್ಟಲು ಅಶಕ್ತರಾಗಿರುತ್ತಾರೆ. ಈ ಸಂಬಂಧ ಅವರಿಗೆ ವಂತೆಗೆ ಹಣವನ್ನು ಸಾಲದ ರೂಪದಲ್ಲಿ ಒದಗಿಸಲು ಬ್ಯಾಂಕ್‌ಗಳೊಂದಿಗೆ ವ್ಯವಹರಿಸಲಾಗುತ್ತಿದ್ದು, ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

**10. ಇತರೆ ವಿಷಯಗಳು:–**

ಇತ್ತೀಚಿನ ಮರಳು ಲಾರಿ ಮಾಲೀಕರ ಮುಷ್ಕರದಿಂದಾಗಿ ನರ್ಮ್ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಅವಶ್ಯವಿರುವ ಮರಳು ಪೂರೈಕೆಯಲ್ಲಿ ತೊಂದರೆಯಾಗಿದ್ದು, ಇದರಿಂದ ಕಾಮಗಾರಿಗಳ ಪ್ರಗತಿಯಲ್ಲಿ ಕುಂಠಿತವಾಗುತ್ತಿದ್ದು, ಅನಧೀಕೃತವಾಗಿ ಸಾಗಣೆ ಮಾಡುತ್ತಿದ್ದ ಲಾರಿಗಳಿಂದ ವಶಪಡಿಸಿಕೊಂಡಿರುವ ಮರಳನ್ನು ನರ್ಮ್ ಕಾಮಗಾರಿಗಳ ಉಪಯೋಗಕ್ಕೆ ಒದಗಿಸಿಕೊಡಬೇಕಾಗಿ ಎಲ್ಲಾ ಅನುಷ್ಠಾನ ಅಧಿಕಾರಿಗಳು ಕೋರಿದರು.

ಕಾಮಗಾರಿಗಳಿಗೆ ಅವಶ್ಯವಿರುವ ಮರಳಿನ ಬೇಡಿಕೆಯನ್ನು ಸಲ್ಲಿಸುವಂತೆ ಎಲ್ಲಾ ಅನುಷ್ಠಾನ ಅಧಿಕಾರಿಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು ಹಾಗೂ ಲಭ್ಯವಿರುವ ಪ್ರಮಾಣದಲ್ಲಿ ಎಲ್ಲಾ ಕಾಮಗಾರಿಗಳಿಗೆ ಸೂಕ್ತವಾಗಿ ಹಂಚಿಕೆ ಮಾಡುವುದಾಗಿ ತಿಳಿಸುತ್ತಾ, ಈ ಸಂಬಂಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಲು ಸೂಚಿಸಿದರು.

ಈ ಕೆಳಕಂಡ ಅಂಶಗಳ ಬಗ್ಗೆ ಆದ್ಯತೆ ಮೇಲೆ ಕ್ರಮವಹಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ನಿರ್ದೇಶಿಸಿದರು.

1. ಅಂತಿಮವಾಗಿ, ಮೈಸೂರಿನ 70,000 ಮನೆಗಳಿಗೆ ಫೆಬ್ರವರಿ ಅಂತ್ಯದೊಳಗೆ 24/7 ನಿರಂತರ ನೀರು ಸರಬರಾಜು ಒದಗಿಸುವುದು.

2. ಕೊಳಚೆ ಪ್ರದೇಶಗಳಲ್ಲಿ ನಿರ್ಮಿಸಿರುವ ಮನೆಗಳನ್ನು ಫಲಾನುಭವಿಗಳಿಗೆ ವಿತರಿಸುವ ಕಾರ್ಯವನ್ನು ತುರ್ತಾಗಿ ಪೂರ್ಣಗೊಳಿಸುವುದು.

3. ಘನತ್ಯಾಜ್ಯ ನಿರ್ವಹಣೆ ಅಡಿಯಲ್ಲಿ ಯೋಜಿಸಿರುವ ಮನೆಗಳಿಗೆ ಕಸದ ಬುಟ್ಟಿಯ ವಿತರಣೆ ಹಾಗೂ ಕಸ ಸಂಗ್ರಹಣೆ ಕಾರ್ಯವನ್ನು ಈ ವರ್ಷದ ಅಂತ್ಯದ ಒಳಗೆ ಪೂರ್ಣಗೊಳಿಸುವುದು.

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು,
ಮೈಸೂರು ಜಿಲ್ಲೆ,
ಹಾಗೂ ವಿಶೇಷಾಧಿಕಾರಿಗಳು ಜೆಎನ್‌ನರ್ಮ್,
ಮೈಸೂರು.

**ಪ್ರತಿಗಳನ್ನು :**

1. ಆಪ್ತಕಾರ್ಯದರ್ಶಿಗಳು, ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಇವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಶ್ರೀ ಹೆಚ್. ವಿಶ್ವನಾಥ್, ಮಾನ್ಯ ಲೋಕಸಭಾ ಸದಸ್ಯರು, ಮೈಸೂರು.
3. ಶ್ರೀ ತನ್ವೀರ್ ಸೇಠ್, ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ್ ಕ್ಷೇತ್ರ ಮೈಸೂರು.
4. ಶ್ರೀ ಸತ್ಯನಾರಯಣ, ಮಾನ್ಯ ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ ಮೈಸೂರು.
5. ಪೂಜ್ಯ ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
6. ಪೂಜ್ಯ ಉಪ ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
7. ಪ್ರಧಾನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ ಸಹಕಾರ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಎಂ.ಎಸ್. ಕಟ್ಟಡ, ಬೆಂಗಳೂರು.
9. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
10. ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ, ಬೆಂಗಳೂರು.

12. ವ್ಯವಸ್ಥಾಪಕ ನಿರ್ದೇಶಕರು, ಕೆಯುಡಬ್ಲ್ಯೂಎಸ್ & ಡಿಬಿ ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿ, ಬೆಂಗಳೂರು.
14. ಜಿಲ್ಲಾಧಿಕಾರಿಗಳ ಆಪ್ತಸಹಾಯಕರು, ಮೈಸೂರು ಜಿಲ್ಲೆ, ಮೈಸೂರು.
15. ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು.
16. ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
17. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
18. ಕಾರ್ಯದರ್ಶಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
19. ಯೋಜನಾ ನಿರ್ದೇಶಕರು, ಡಿಯುಡಿಸಿ, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು.
20. ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆಎಸ್‌ಆರ್‌ಟಿಸಿ, ಮೈಸೂರು.
21. ಕಾರ್ಯಪಾಲಕ ಇಂಜಿನಿಯರ್, ಕೆಯುಡಬ್ಲ್ಯೂಎಸ್ & ಡಿಬಿ, ಜೆಎನ್‌ನರ್ಮ್ ವಿಭಾಗ, ಮೈಸೂರು.
22. ಕಾರ್ಯಪಾಲಕ ಇಂಜಿನಿಯರ್, ಕೆಎಸ್‌ಸಿಬಿ, ಜೆಎನ್‌ನರ್ಮ್ ವಿಭಾಗ, ಮೈಸೂರು.
23. ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.
24. ಜಂಟಿ ನಿರ್ದೇಶಕರು, ನಗರ ಯೋಜನೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
25. ಉಪನಿರ್ದೇಶಕರು, ಭೂ ದಾಖಲೆಗಳು, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು.

ಜಿಲ್ಲಾಧಿಕಾರಿಗಳು,
ಮೈಸೂರು ಜಿಲ್ಲೆ,
ಹಾಗೂ ವಿಶೇಷಾಧಿಕಾರಿಗಳು ಜೆಎನ್‌ನರ್ಮ್,
ಮೈಸೂರು.